ಮೈಸೂರ ಗಿಜಿಟ.

ನಂ. XXXI.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 51.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 24, ಸ್ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಡಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರಿಜಿಸ್ಟ್ರೇರ್ಸ್ ವ ಯುಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್ಡಿಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷನ್ಸುಗಳು—

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

ಸೂಚನೆ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೇ ಡಿಸೆಂಬರ್ 1896.

ನಂ. 6972.—ಲೋ. ಫಂ. 40.—92, ಮೆಸ್ಸರ್ಸ್ ಟಿ. ಎಸ್. ಮಲ್ಲಿಕಾರ್ಜುನಯ್ಯನವರು, ರಾಜೀನಾಮೆ ಕೊಡಲ್ಪಟ್ಟ ಮೆಸ್ಸರ್ಸ್ ಕೆ. ವೈಲಾರರಾಯರ ಸ್ಥಳದಲ್ಲಿ ಕಿಲ್ಲೆ ಮೊಹಲ್ಲಕ್ಕಾಗಿ ಮೈಸೂರ ಪಟ್ಟಣ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 7026.—ಜು. 792, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿ, ಚಾಮರಾಜನಗರದ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಎಸ್. ಡಿ. ಕೃಷ್ಣಪ್ಪನವರು, 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 7028.—ಜು. 794, ಚಾಮರಾಜನಗರದ ತಾಲ್ಲೂಕು ಅಮಲ್ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ಎಸ್. ಡಿ. ಕೃಷ್ಣಪ್ಪನವರಿಗೆ, ಸ್ 1859ನೇ ಇಸವಿಯ XIIIನೇ ಆಕ್ಟ್ (ಕಂಟ್ರಾಕ್ಟು ಉಲ್ಲಂಘನೆ ಬಗ್ಗೆ ಉಂಟುದ ಆಕ್ಟು) ಅನುಸರಿಸಿ ಬರುವ ಮೊಕದ್ದಮೆಗಳನ್ನು ದರ್ಯಾಫ್ತ್ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 26ನೇ ನವಂಬರ್ 1896.

ನಂ. 6132.—ಲೋ. ಫಂ. 83—96, ಲ್ಯಾಂಡ್ ಆಕ್ವಿಜಿಷ್ಷ ರೆಗ್ಯುಲೇಷನಿನ 6ನೇ ಸೆಕ್ಷ್ಷ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಜಂಟಿಸಲ್ಪಟ್ಟಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆ ಮತ್ತು ಜಮ್ಮಿ ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರ್ ಷಹರ್ ನಜರ್‌ಬಾದ್ ಮೊಹಲ್ಲಾ ಇಟ್ಟಿಗ್ಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯ ಯದುರಿಗಿರುವ ರಸ್ತೆಯನ್ನ ಬಡಾಯಿಸುವ ಬಗ್ಯಾಗಿ ಬೇಕಾಗಿರುತ್ತ್ತೆ:—

ಜಂಬ್ಲ್ ನಂ.	ಪೀಡಿಯ ಹೆಸರು.	ಹೋಲ್ ನಂಬರು.	ನಾಮಕೇರ ಹೆಸರು.	ಅಪಬ್ಲೈಕಾನಾಗಿರುವ ಸ್ವತ್ತಿನ ವಿವರ.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಜಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಪರಾ.
1	ಇಟ್ಟಿಗ್ಗೂಡಿನಲ್ಲಿ ಮೆಸ್ಟರ್ ನಾರಾಯಣಸಾಮಿ ಮೊದಲಿಯಾರ್ರ ಮನೆಯು ಯದುರಿಗಿರುವ ರಸ್ತೆ.	911	ನಂಜುಂಡಯ್ಯ, ಹುಚ್ಚಸ್ವಾಮಿ ಮೊದಲಿಯಾರ್, ರಾಮಸ್ವಾಮಿ ಮೊದಲಿಯಾರ್ ಮತ್ತು ಚಾಮುಂಡಪ್ಪ.	ಒದು ಅಂಕಣಗಳ ಹೆಂಚಿನ ಮನೆ, ಮೂರು ಅಂಕಣಗಳ ಹೆಂಚಿನ ಹೈಸ್ಕೂಲ್, 1·44 ಚದುರದ ತಾರು ಮಾಡಲ್ಪಟ್ಟ ಭಾಗ ಮತ್ತು 6 ಅಂಕಣಗಳ ತಳ್ಳು ಪೋಷ್ ಮಾಡಲ್ಪಟ್ಟ ಭಾಗ.	64	$\frac{18+16}{2}$	ರಸ್ತೆ.	ರಸ್ತೆ.	ದುಂಡಣ್ಣನ ಮನೆ.	ಗಲ್ಲಿ.	ಈ ಪ್ರದೇಶದಲ್ಲಿ ಮನೆಗಳು ಒಂದಕ್ಕೊಂದು ಬಹಳ ಹತ್ತಿರ ಮತ್ತು ಗಾಳಿ ಸಂಚಾರಕ್ಕೆ ಅಡಚಣೆಯಾಗಿದೆ. ಆದ್ದರಿಂದ ಸದರಿ ಪ್ರದೇಶವು ಶಿಥಿಲಾವಸ್ಥೆಗೆ ಬಂದಿದೆ. ಆದ್ದರಿಂದ ಅಭಿವೃದ್ಧಿಯಾಗಿದೆ.

ತಾರೀಖು 2ನೇ ಡಿಸೆಂಬರ್ 1896.

ನಂ. 6331.—ಲೋ. ಫಂ. 65—96, ಸ್ಯ 1894ನೇ ಇಸವಿಯ ನಂ. VIIನೇ ಲ್ಯಾಂಡ್ ಅಕ್ವಿಜಿಷ್ಷ ರೆಗ್ಯುಲೇಷನಿನ 6ನೇ ಸೆಕ್ಷ್ಷ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಜಮ್ಮಿಗಳು ಸರ್ಕಾರ್ ಕೆಲಸಕ್ಕೆ ಅಂದರೆ ಆಲೂರ್ ಷಹರ್ ಬಡಾವಣೆ ಬಗ್ಯಾಗಿ ಬೇಕಾಗಿರುತ್ತ್ತೆ:—

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮ್ಮಿ ತಪಶೀಲು. ಸರ್ವೆ ನಂ.	ವಿಸ್ತೀರ್ಣ. ಬೇಕಾದ	ವಿಸ್ತೀರ್ಣ. ಬೇಲೇಜು.	ಜಕ್ಕುಬಂದಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
						ಎ. ಗುಂ.	ರೂ. ಆ.				
ಹಾನಗಲ್.	ಆಲೂರ್ ಸಬ್ ತಾಲ್ಲೂಕು.	ಆಲೂರು.	ಆಲೂರು.	ಹುಸೇನ್‌ಸಾಬಿ (ಅನುಭವದಾರು) ಸುಬ್ಬೇಗೌಡ ಮತ್ತು ಬಸವೇಗೌಡ)	ಸರ್ವೆನಂಬರ್ 20ರ ಭಾಗ	ಮುಷ್ಕಿ	1—20	1—4	ಸರ್ವೆ ನಂಬರ್ 20ರ ಭಾಗ	ಕೊಳಕ್ಕೆ ಹೋಗುವ ರಸ್ತೆ	ಬಸವಲಿಂಗೇಗೌಡನ ಮತ್ತು ಇತರರ ಮನೆಗಳು	ಹಯಾತ್‌ಸಾಬಿಯ ಮತ್ತು ಇತರರ ಜಮ್ಮಿನುಗಳು
				ಬಸವಲಿಂಗೇಗೌಡ	ಡಿಟೋ	ಡಿಟೋ	1—29	1—8	ಅಸ್ಪತ್ರೆಯ ಕಂಪೌಂಡ್	ಸುಬ್ಬೇಗೌಡನ ಬಸವೇಗೌಡನ ಮತ್ತು ಇತರರ ಜಮ್ಮಿಗಳು	ಬಸವ ಲಿಂಗೇಗೌಡನ, ದಾಸೇಗೌಡನ, ಹುಚ್ಚೇಗೌಡನ ಮತ್ತು ಇತರರ ಮನೆಗಳು ಮತ್ತು ಹಿತ್ತಲುಗಳು	ಡಿಟೋ

ತಾರೀಖು 24ನೇ ನವಂಬರ್ 1896.

ನಂ. 5973.—4.—ಲೋ. ಫಂ. 17.—96, ಬೆಂಗಳೂರು ವ ಮೈಸೂರು ಪಟ್ಟಣಗಳ ಮ್ಯುನಿಸಿಪಾಲಿಟಿಗಳಲ್ಲಿ ಇತರರ ಚುನಾವಣೆಗಳನ್ನ ನಡಿಸುವ ಬಗ್ಗೆ ಹೊಸ ಜಾರೀಲಿರುವ ರೂಲ್ಸಿಗೆ ಬದಲಾಗಿ ಈ ಕೆಳಗೆ ಕಂಡ ತಿದ್ದುಪಡಿಯಾದ ರೂಲ್ಸ್ ಜಾರೀಗೆ ತರುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ನಿಶ್ಚಯಿಸಿರುತ್ತಾರೆ:—

ರೂಲ್ಸ್.

I. ಮುತ್ತೊಂದು ಹುಕುಂ ಕೊಡುವ ಪರಿಯಂತ, ಪೈಸಿಡೆಂಟರು ಮತ್ತು ಯಕ್ಸ್ ಅಫಿಷಿಯೋ ಮೆಂಬರ್‌ಗಳೂ ದೇಶೀಲ್ ಮ್ಯುನಿಸಿಪಲ್ ಕಮ್ಮಿಷನರುಗಳ ಒಟ್ಟು ಸಂಖ್ಯೆಯು, ಬೆಂಗಳೂರು ವ ಮೈಸೂರು ಪಟ್ಟಣಗಳ ಪ್ರತಿ ಒಂದರಲ್ಲಿಯೂ 20 ಆಗಿರತಕ್ಕದ್ದು. ಇವರುಗಳಲ್ಲಿ ಪ್ರತಿ ಮ್ಯುನಿಸಿಪಾಲಿಟಿಯೊಳಗೂ ಅರ್ಧ ಸಂಖ್ಯೆಯು ಕಂದಾಯ ಕೊಡುವವರಿಂದ ಚುನಾಯಿಸಲ್ಪಡತಕ್ಕದ್ದು, ಬೂಕಿ ಅರ್ಧ ಉದ್ಯೋಗತಃ ಆಗಲಿ ಯಾ ಹೆಸರಿನಿಂದಾಗಲಿ ಗವರ್ನಮೆಂಟಿನವರಿಂದ ನೊಕರಮ್ಯಾಡಲ್ಪಡತಕ್ಕದ್ದು. ಪ್ರತಿ ಡಿವಿಜನ್‌ನಲ್ಲಿಯೂ ಚುನಾಯಿಸಲ್ಪಡಬೇಕಾದ ಮೆಂಬರುಗಳ ಸಂಖ್ಯೆಯು ಪೈಸಿಡೆಂಟರವರಿಂದ ಪ್ರಸಿದ್ಧಪಡಿಸಲ್ಪಡತಕ್ಕದ್ದು.

II. ಮೈಸೂರು ಪಟ್ಟಣ ಮ್ಯುನಿಸಿಪಾಲಿಟಿಯಲ್ಲಿ ಬೆಂಗಳೂರಲ್ಲಿರುವ ಮೇರೆ ಅದೇ ಕೆಲಸಕ್ಕಾಗಿ ಬೇರೆ ಪೈಸಿಡೆಂಟರಿಲ್ಲದೆ ಇರುವದರಿಂದ ಡೆಪ್ಯುಟಿ ಕಮ್ಮಿಷನರವರು ತಾತ್ಕಾಲಕ್ಕೆ ರೆಗ್ಯುಲೇಷ್ನ ಅನುಸರಿಸಿ ಸದರೀ ಮ್ಯುನಿಸಿಪಾಲಿಟಿಯ ಎಕ್ಸ್ ಅಫಿಷಿಯೋ ಪ್ರಸಿಡೆಂಟರಾಗಿಯೂ ಮತ್ತು ಗವರ್ನಮೆಂಟಿನಿಂದ ನೊಕರಮ್ಯಾಡಲ್ಪಟ್ಟ ವೈಸ್ ಪೈಸಿಡೆಂಟರು ಸದರೀ ಮ್ಯುನಿಸಿಪಾಲಿಟಿಯ ಒಬ್ಬ ಎಕ್ಸ್ ಅಫಿಷಿಯೋ ಮೆಂಬರುಗಳಾಗಿಯೂ ಯಿರತಕ್ಕದ್ದು.

III. ಒಬ್ಬ ಮ್ಯುನಿಸಿಪಲ್ ಕಮ್ಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹರಾಗಬೇಕಾದರೆ ಅವರು—

(*a*) ಪುರುಷರಾಗಿರಬೇಕು;

(*b*) 25 ವರುಷ ವಯಸ್ಸು ಪೂರೈಸಿರಬೇಕು;

(*c*) ವಿದ್ಯಾವಂತರಾಗಿರಬೇಕು;

(*d*) ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಮ್ಯುನಿಸಿಪಲ್ ಸರಹದ್ದುಗಳಲ್ಲಿ ವಾಸ ಮಾಡುತ್ತಿರಬೇಕು;

(*e*) ಚುನಾವಣೆಯ ಹಿಂದಿನ ವರುಷದಲ್ಲಿ ಸದರೀ ರೆಗ್ಯುಲೇಷ್ನ ಅನುಸರಿಸಿ ತೆರಬೇಕಾದ ಮೊತ್ತದ ಮೊಬಲಗಿನಲ್ಲಿ 10 ರೂಪಾಯಿಗಳಿಗೆ ಕಡಿಮೆ ಇಲ್ಲದ ದರಗಳಾಗಲಿ, ತೆರಿಗೆಗಳಾಗಲಿ, ಜಮ್ಮಿ ಕಂದಾಯ ಯಾ ಮೊಹತರ್ಫಾ ಆಗಲಿ, ಇವುಗಳಲ್ಲಿ ಒಂದು ಯಾ ಹೆಚ್ಚು ಬಗೆಗಳ ಮೊಬಲಗನ್ನು ಪಟ್ಟಣ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು; ಅಥವಾ ಮೇಲ್ಕಂಡ ವರುಷದಲ್ಲಿ ಮನೆಯ ಯಾ ಅಂಗಡಿಯ ಯಾ ಇತರ ವಿಧಕಟ್ಟಡದ ಸ್ವಂತಗಾರರಾಗಿಯೂ, ಭೋಗ್ಯದಾರರಾಗಿಯೂ ಅಥವಾ ಬಾಡಿಗೆದಾರರಾಗಿಯೂ ಅನುಭವಿಸುತ್ತಿರಬೇಕು: ಮೇಲೆ ಹೇಳಿದ ಕಟ್ಟಡಕ್ಕೊತ್ತರ ಈ ಕ್ಲಾಜಿನ ಮೊದಲ್‌ಭಾಗದಲ್ಲಿ ಹೇಳಿರುವ ಮೊಬಲಗಲ್ಲದೆ 10 ರೂಪಾಯಿಗೆ ಕಡಿಮೆ ಯಿಲ್ಲದ ತೆರಿಗೆಯನ್ನ ಅಂಥಾ ವರುಷಕ್ಕಾಗಿ ಪಟ್ಟಣ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು. ಪರಂತು 1895ನೇ ಇಸವಿಯ IIIನೇ ರೆಗ್ಯುಲೇಷ್ನ ಅನುಸರಿಸಿ ರಿಜಿಸ್ಟ್ರ್ಯಾಡಲ್ಪಟ್ಟ ಒಂದು ಕಂಪೆನಿಯಾಗಲಿ ಯಾ ಒಂದು ಅವಿಭಕ್ತ ಕುಟುಂಬವಾಗಲಿ ಈ ಕ್ಲಾಜಿನಲ್ಲಿ ವಿಧಿಸಲ್ಪಟ್ಟ ನಿಬಂಧನಗಳನ್ನ ಅದರಲ್ಲಿ ಹೇಳಿದ ಮೊಬಲಗುಗಳಿಗೆ ಎರಡರಪ್ಪಟ್ಟಕ್ಕೆ ಕಡಿಮೆ ಇಲ್ಲದೆ ನೆರವೇರಿಸಿದ ತರುವಾಯ ಇತರ ಅವಶ್ಯಕವಾದ ಯೋಗ್ಯತೆಗಳುಳ್ಳ ಅದರ ಯಾವನೊಬ್ಬ ಮೆಂಬರಾಗಲಿ ಆ ಕಂಪೆನಿಯ ಯಾ ಆ ಕುಟುಂಬದ ವಾರಸ್ದಾರರಾಗಿ ಇರುವದರಿಂದ ಚುನಾವಣೆಗೆ ಅರ್ಹರಾಗಿರುತ್ತಾರೆ.

(*f*) ಇಂಡಿಯನ್ ಪಿನಲ್‌ಕೋಡ್ ಪ್ರಕಾರ 6 ತಿಂಗಳಿಗೆ ಕಡಿಮೆ ಇಲ್ಲದ ಕಾಲಕ್ಕೆ ಖೈದಿನೊಡನೆ ಸಿಕ್ಷಿಸಲ್ಪಡತಕ್ಕ ಒಂದು ತಕ್ಕೀರಿನಿಂದ ಆಪಾದಿಸಲ್ಪಟ್ಟಿರ ಕೂಡದು;

(*g*) ಚುನಾವಣೆ ತಾರೀಖಿನ ಹಿಂದೆ ಎರಡು ವರುಷದೊಳಗಾಗಿ ದಿವಾಳಿ ಖೋರರೆಂದು ಪ್ರಸಿದ್ಧಿ ಪಡಿಸಲ್ಪಟ್ಟಿರ ಕೂಡದು;

(*h*) ಸದರೀ ಮ್ಯುನಿಸಿಪಾಲಿಟಿಯ ಒಬ್ಬ ಆಫಿಸರಾಗಿಯಾಗಲಿ ಯಾ ನೌಕರರಾಗಿಯಾಗಲಿ ಕೆಲಸದಲ್ಲಿರಕೂಡದು;

(*i*) ಯಾವ ಜಾಯಂಟ್ ಸ್ಟಾಕ್ ಕಂಪೆನಿಯಲ್ಲಿಯೂ, ಮ್ಯುನಿಸಿಪಾಲಿಟಿಯೊಂದಿಗೆ ಅಥವಾ ಅದಕ್ಕಾಗಿ ನಡಿಸಲ್ಪಟ್ಟ ಕಂಟ್ರಾಕ್ಟ್ ವ ಕೆಲಸ ಯಿವಕ್ಕಾಗಿ ಭಾಗಸ್ಥರಾಗಿರುವದು ವಿನಹ ಅನ್ಯಥಾ ಮತ್ಯಾವ ಪ್ರಯಿದೆಯೂ ಉಳ್ಳಂಥಾವರಾಗಿ ಯಿರಕೂಡದು.

IV. ಪ್ರತಿ ಗಂಡಸರೂ ಚುನಾವಣೆ ಬಗ್ಗೆ ಅಭಿಪ್ರಾಯ ಕೊಡಲಿಕ್ಕೆ ಅರ್ಹರಾಗಬೇಕಾದರೆ ಅವರು 21 ವರುಷ ವಯಸ್ಸು ಪೂರೈಸಿಯೂ ಚುನಾಯಿಸಲ್ಪಡಬೇಕಾಗಿರುವ ಡಿವಿಜನಿನ ಸರಹದ್ದುಗಳಲ್ಲಿ ವಾಸ ಮಾಡುತ್ತಿರುವವರಾಗಿಯೂ ಈ ಕೆಳಗೆ ಕಂಡ ಪರತ್ತುಗಳ ಪೈಕಿ ಒಂದು ಯಾ ಹೆಚ್ಚು ಬಗೆಗಳು ನೆರವೇರಿಸಿದವರಾಗಿಯೂ ಯಿರಬೇಕು:—

(*a*) ಚುನಾವಣೆಯ ಹಿಂದಿನ ವರುಷದಲ್ಲಿ ಮ್ಯುನಿಸಿಪಲ್ ದರಗಳಾಗಲಿ ಯಾ ತೆರಿಗೆಗಳಾಗಲಿ ಯಾ ಗವರ್ನಮೆಂಟ್ ಜಮ್ಮಿ ಕಂದಾಯವಾಗಲಿ ಅಥವಾ ಆ ವರುಷಕ್ಕೆ ಮೊತ್ತದ ಮೊಬಲಗಿನಲ್ಲಿ 5 ರೂಪಾಯಿಗಳಿಗೆ ಕಡಿಮೆ ಇಲ್ಲದೆ ಮ್ಯುನಿಸಿಪಾಲಿಟಿಗೆ ಮೊಹತರ್ಫಾ ಜಮಾ ದಾಖಲಾಗಿಯಾಗಲಿ ಕೊಟ್ಟಿರಬೇಕು, ಅಥವಾ ಅವರು ಚುನಾವಣೆ ಬಗ್ಗೆ ಅಭಿಪ್ರಾಯ ಕೊಡಲಿಕ್ಕೆ ಅಪೇಕ್ಷಿಸುವ ಡಿವಿಜನಿನಲ್ಲಿ ಮೇಲ್ಕಂಡ ವರುಷದಲ್ಲಿ ಮನೆಯ, ಅಂಗಡಿಯ ಯಾ ಇತರ ಕಟ್ಟಡದ ಅನುಭವದಾರ್ರು ಯಾ ಮಾಲೀಕರಾಗಿಯೂ ಬಾಡಿಗೆದಾರ್ರು ಯಾ ಭೋಗ್ಯದಾರರಾಗಿಯೂ ಯಿರಬೇಕು; ಮೇಲ್ಕಂಡ ಕಟ್ಟಡಕ್ಕೊತ್ತರ ಸದರೀ ವರುಷಕ್ಕೆ 5 ರೂಪಾಯಿಗಳಿಗೆ ಕಡಿಮೆ ಇಲ್ಲದ ತೆರಿಗೆಯನ್ನು ಪಟ್ಟಣ ಮ್ಯುನಿಸಿಪಾಲಿಟಿಗೆ ಕೊಟ್ಟಿರಬೇಕು.

(*b*) ಇಂಡ್ಯದ ಅಥವಾ ಇತರ ದೇಶದ ಯೂನಿವರ್ಸಿಟಿಯ ಗ್ರಾಜ್ಯುಯೇಟ್ಟಾಗಿರಬೇಕು.

(*c*) ಚುನಾವಣೆ ನಡಿಯುವ ಹಿಂದಿನ ವರುಷಕ್ಕಾಗಿ ಪಟ್ಟಣ ಮ್ಯುನಿಸಿಪಾಲಿಟಿಗೆ ಮ್ಯುನಿಸಿಪಲ್ ರೆಗ್ಯುಲೇಷ್ನ ಪ್ರಕಾರ ಆ ವರುಷಕ್ಕೆ ಕೊಡಬೇಕಾದ ತೆರಿಗೆಗಳ 20 ರೂಪಾಯಿಗಳಿಗೆ ಕಡಿಮೆ ಇಲ್ಲದ ಮೊತ್ತದ ಮೊಬಲಗನ್ನ ಕೊಟ್ಟು ಇದ್ದು 1895ನೇ ಇಸವಿಯ IIIನೇ ರೆಗ್ಯುಲೇಷ್ನ ಮೇರೆ ರಿಜಿಸ್ಟರ್ ಮಾಡಲ್ಪಟ್ಟ ಯಾವ ಕಂಪೆನಿಯಿಂದಲಾಗಲಿ ಅಧಿಕಾರ ಹೊಂದಿರಬೇಕು ಯಾ ಅಂಥಾ ಕಂಪೆನಿಗೆ ಸೆಕ್ರೆಟರಿಯಾಗಿರಬೇಕು.

V. ಚುನಾಯಿಸಲ್ಪಟ್ಟ ಮ್ಯುನಿಸಿಪಲ್ ಕಮ್ಮಿಷನರು ಗವರ್ನ್‌ಮೆಂಟಿನವರಿಂದ ತೆಗದುಹಾಕಲ್ಪಟ್ಟ ಅಥವಾ ಅನರ್ಹರಾದ ಸಂದರ್ಭದಲ್ಲಿ ವಿನಾ ಅವರು ಚುನಾಯಿಸಲ್ಪಟ್ಟ ತಾರೀಖು ಮೊದಲು ಎರಡು ವರುಷಗಳ ವರವಿಗೆ ಮತ್ತು ಅವರ ಸ್ಥಳದಲ್ಲಿ ಬೇರೊಬ್ಬರು ಚುನಾಯಿಸಲ್ಪಟ್ಟರೆಂದು ಪ್ರಕಟಿಸಲ್ಪಡುವ ಪರಿಯಂತರವೂ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

VI. ಮ್ಯುನಿಸಿಪಲ್ ಕಮ್ಮಿಷನರುಗಳ ಚುನಾವಣೆಯು ಸಾಧಾರಣವಾಗಿ ಎರಡು ವರುಷಗಳಿಗೊಂದಾವರ್ತಿ ಗವರ್ನ್‌ಮೆಂಟಿನವರಿಂದ ಗೊತ್ತುಮಾಡಲ್ಪಡಬಹುದಾದ ಫಲಾನಾ ತಿಂಗಳು ಮತ್ತು ಫಲಾನಾತಾರೀಖು ಯಾ ತಾರೀಖುಗಳಲ್ಲಿ ನಡಿಸಲ್ಪಡತಕ್ಕದ್ದು. ಅಂಥಾ ಪ್ರತಿ ಚುನಾವಣೆಯೂ ಚೀಫ್ ಕಮಿಷನರವರ ಮೂಲಕ ನಡಿಸಲ್ಪಡತಕ್ಕದ್ದಲ್ಲದೆ ಅದು ಪ್ರೆಸಿಡೆಂಟರ ಮೇಲ್ವಿಚಾರಣೆಯಲ್ಲಾಗಲಿ ಅಥವಾ ಆ ಕೆಲಸಕ್ಕಾಗಿ ಆವರಿಂದ ನಿಯಮಿಸಲ್ಪಟ್ಟ ಇತರ ಆಫಿಸರ ಮೇಲ್ವಿಚಾರಣೆಯಲ್ಲಾಗಲಿ ಚುನಾವಣೆ ತಾರೀಖಿಗೆ ಅಥವಾ ಪಕ್ಷ ವೊಂದು ತಿಂಗಳ ಮುಂಚಿತವಾಗಿ ಮೈಸೂರ ಗೆಜೆಟ್ಟಿನಲ್ಲಿ ನೋಟಿಸ್ ಮೂಲಕ ಪ್ರಸಿದ್ಧಪಡಿಸುವಂಥಾ ಸ್ಥಳದಲ್ಲಿಯೂ ಕಾಲದಲ್ಲಿಯೂ ನಡಿಸಲ್ಪಡತಕ್ಕದ್ದು.

VII. ಕಮ್ಮಿಷನರುಗಳಾಗಿ ಚುನಾಯಿಸಲ್ಪಡುವ ಬಗ್ಗೆ ಅರ್ಹರಾದ ಮನುಷ್ಯರ ಹೆಸರು ಮತ್ತು ಅಂಥಾ ಚುನಾವಣೆ ಬಗ್ಗೆ ಅಭಿಪ್ರಾಯ ಕೊಡಲು ಯೋಗ್ಯತಾಉಳ್ಳ ಮನುಷ್ಯರ ಹೆಸರು ಸುದಾ ತೋರಿಸುವ ಒಂದು ಪಟ್ಟಿಯು, ಚುನಾವಣೆ ಬಗ್ಗೆ ಗೊತ್ತು ಮಾಡಲ್ಪಟ್ಟ ತಾರೀಖಿಗೆ ಮುಂಚಿತವಾಗಿ ಎರಡು ತಿಂಗಳಿಗೆ ಜಾಸ್ತಿಯಿಲ್ಲದೆ ಪ್ರೆಸಿಡೆಂಟರವರಿಂದ ಮೈಸೂರ ಗೆಜೆಟ್ಟಿನಲ್ಲಿ ಘಾಯಿಷ್ಕಾಡಲ್ಪಡತಕ್ಕದ್ದು.

VIII. ಚುನಾಯಿಸಲ್ಪಡುವ ಬಗ್ಯಾಗಲಿ ಅಥವಾ ಆ ಬಗ್ಗೆ ಅಭಿಪ್ರಾಯ ಕೊಡುವ ಬಗ್ಯಾಗಲಿ ಅರ್ಹರಾದ ಮನುಷ್ಯರ ಹೆಸರು VIIನೇ ಪ್ಯಾರಾದಲ್ಲಿ ನಮೂದಾದಪಟ್ಟಿಯಲ್ಲಿ ಬಿಡಲ್ಪಟ್ಟಿದ್ದಕ್ಕೆ, ಅವರು, ಸದರೀ ಪಟ್ಟಿಯು ಘಾಯಿಷ್ಕಾಡಲ್ಪಟ್ಟ ತಾರೀಖಿನ ಮೊದಲು ನ್ಯೂಂದು ತಿಂಗಳೊಳಗಾಗಿ, ಆವರ ಹೆಸರನ್ನು ಸದರೀ ಪಟ್ಟಿಯಲ್ಲಿ ದಾಖಲ್ಮಾಡುವಂತೆ ಪ್ರೆಸಿಡೆಂಟರವರಿಗೆ ಅರ್ಜಿ ಬರೆದು ಕೊಳ್ಳತಕ್ಕದ್ದು. ಅಂಥಾ ಅರ್ಜಿಯು ದಾಖಲಾದ ತರುವಾಯ, ಪ್ರೆಸಿಡೆಂಟರು ಅರ್ಜೀದಾರನ ಹೆಸರನ್ನು ದಾಖಲ್ಮಾಡತಕ್ಕದ್ದೆಂತಾಗಲಿ ಯಾ ಅನ್ಯಥಾ ಆಗಲಿ ಹುಕುಂ ಮಾಡತಕ್ಕದ್ದಲ್ಲದೆ ಮತ್ತು ಸದರೀ ವಿಚಾರಣೆಯ ಖರ್ಚುಗಳ ಪಾವತೀ ವಿಷಯದಲ್ಲಿ ಸಹ ಅವರಿಗೆ ನ್ಯಾಯವಾಗಿ ತೋರುವಂತೆ ಹುಕುಂ ಮಾಡತಕ್ಕದ್ದು, ಮತ್ತು ಅಂಥಾ ಹುಕುಂ ಆಖೈರಾದ್ದಾಗಿರತಕ್ಕದ್ದು.

IX. ಚುನಾವಣೆಗೆ ಗೊತ್ತಾದ ತಾರೀಖಿಗೆ ಅಥಮ ಪಕ್ಷ ಮೂರು ವಾರಗಳ ಮುಂಚೆ ಯಾವ ಮನುಷ್ಯರಾದರೂ ಮೇಲ್ಕಂಡ ರೂಲ್ಸ್ ಅನುಸಾರವಾಗಿ ಬಬ್ಬ ಮ್ಯುನಿಸಿಪಲ್ ಕಮ್ಮಿಷನರಾಗುವದಕ್ಕೆ ಯಿಷ್ಟಪಡುವ ಪಕ್ಷಕ್ಕೆ ಅಂಥಾ ಮನುಷ್ಯರು ತಮ್ಮ ಹೆಸರನ್ನೂ ಮತ್ತು ತಾವು ಯಾವ ಡಿವಿಜನಿಗೆ ಮ್ಯುನಿಸಿಪಲ್ ಕಮ್ಮಿಷನರಾಗಿರುವ ಬಗ್ಗೆ ಅಪೇಕ್ಷಿಸುತ್ತಾರೋ ಅದನ್ನೂ ನಮೂದಿಸಿ ಪ್ರೆಸಿಡೆಂಟರಿಗೆ ಬರಹ ಮೂಲಕ ತಿಳಿಸತಕ್ಕದ್ದು. ತರುವಾಯ ಅಂಥಾ ಅರ್ಜಿದಾರರ ಪಟ್ಟಿಯು ಮೈಸೂರ ಗೆಜೆಟಿನಲ್ಲಿ ಘಾಯಿಷ್ಕಾಡಲ್ಪಡತಕ್ಕದ್ದಲ್ಲದೆ, ಚುನಾವಣೆ ಬಗ್ಗೆ ಗೊತ್ತಾದ ತಾರೀಖಿಗೆ ಅಥಮಪಕ್ಷ ಹತ್ತು ದಿನಗಳ ಮುಂಚಿತವಾಗಿ ಪ್ರತಿ ಯೊಬ್ಬ ಅಭಿಪ್ರಾಯಸ್ಥರಿಗೂ ಸಹ ಕಳುಹಿಸಲ್ಪಡತಕ್ಕದ್ದು.

X. ಚುನಾಯಿಸಲ್ಪಟ್ಟ ತರುವಾಯ, ಪ್ರೆಸಿಡೆಂಟರು, ಪ್ರತಿ ಚುನಾವಣೆಯಲ್ಲಿಯೂ ಉಮೇದ್ವಾರರುಗಳನ್ನ ಅವರವರಿಗೋಸ್ಕರ ಕೊಡೋಣಾದ ಅಭಿಪ್ರಾಯಗಳ ಕ್ರಮಾನುಸಾರವಾಗಿ ವಿಂಗಡಿಸಿ, ಚುನಾಯಿಸಲ್ಪಡಬೇಕಾದ ಮ್ಯುನಿಸಿಪಲ್ ಕಮ್ಮಿಷನರುಗಳ ಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟು, ಅವರವರ ದರ್ಜೆ ಕ್ರಮವನ್ನನುಸರಿಸಿ ಚುನಾಯಿಸಲ್ಪಟ್ಟಂತೆ ತಿಳಿಸತಕದ್ದು; ಪರಂತು ಯಾವ ಕಮ್ಮಿಷನರಾಗಲಿ, ಅವರಿಗೋಸ್ಕರ ಅಭಿಪ್ರಾಯ ಕೊಡುವ ಬಗ್ಗೆ ಅರ್ಹರಾದ ಜನಗಳ ವೊಟ್ಟು ಸಂಖ್ಯೆಯಲ್ಲಿ ಅಥವಮಪಕ್ಷ $\frac{1}{8}$ನೇ ಸಂಖ್ಯೆಯುಳ್ಳ ಜನಗಳ ಅಭಿಪ್ರಾಯ ಪಡೆದ ಹೊರ್ತು ಚುನಾಯಿಸಲ್ಪಟ್ಟಂತೆ ಭಾವಿಸಲ್ಪಡತಕ್ಕದ್ದಲ್ಲ. ಒಂದೇ ಕೆಲಸಕ್ಕೆ ಎರಡು ಯಾ ಹೆಚ್ಚು ಉಮೇದ್ವಾರರು ಸಮ ಸಂಖ್ಯೆಯ ಅಭಿಪ್ರಾಯ ಹೊಂದುವದಾದರೆ, ಪ್ರೆಸಿಡೆಂಟರು ಆ ಪೈಕಿ ಯಾರು ಚುನಾಯಿಸಲ್ಪಡತಕ್ಕದ್ದೋ ಅದನ್ನು ತೀರ್ಮಾನಿಸತಕ್ಕದ್ದು.

XI. ಚುನಾವಣೆ ಬಗ್ಯಾಗಿ ಉಮೇದ್ವಾರರು ಯಿಲ್ಲದ ಪಕ್ಷದಲ್ಲಿ ಅಥವಾ ಆವರು ಆವಶ್ಯಕವಾದ ಕಮ್ಮಿ ಸಂಖ್ಯೆಯ ಅಭಿಪ್ರಾಯವನ್ನಾದರೂ ಪಡೆಯಲಿಕ್ಕೆ ತಪ್ಪಿದ ಪಕ್ಷದಲ್ಲಿ ಅಂಥಾ ನೇಮಣೂಕೆಯು ಗವರ್ನ್‌ಮೆಂಟಿನವರಿಂದ ಭರ್ತೀ ಮಾಡಲ್ಪಡತಕ್ಕದ್ದು.

XII. ಯಾವ ಮ್ಯುನಿಸಿಪಲ್ ಕಮ್ಮಿಷನರಾದರೂ ಅವರ ರಾಜೀನಾಮೆಯನ್ನು ಪ್ರೆಸಿಡೆಂಟರಿಗೆ ವೊಪ್ಪಿಸಬಹುದು, ಮತ್ತು ಅಂಥಾ ರಾಜೀನಾಮೆಯು ಅಂಗೀಕರಿಸಲ್ಪಟ್ಟು, ಯಾ ಅಂಥಾ ರಾಜೀನಾಮೆಯ ತಾರೀಖು ಲಾಗಾಯತ್ತು ಎರಡು ತಿಂಗಳು ಕಳೆದ ತರುವಾಯ ಅವರು ಸದರೀ ಉದ್ಯೋಗವನ್ನ ಖಾಲೀ ಮಾಡಿದಂದೆ ಭಾವಿಸಲ್ಪಡತಕ್ಕದ್ದು.

XIII. ಸಾಧಾರಣವಾಗಿ ನಡಿಯತಕ್ಕ ಎರಡು ಚುನಾವಣೆಗಳ ಮಧ್ಯಕಾಲಗಳಲ್ಲಿ ಮ್ಯುನಿಸಿಪಲ್ ಕಮ್ಮಿಷನರುಗಳ ಮರಣದಿಂದಾಗಲಿ, ರಾಜೀನಾಮೆಕೊಡುವಣದರಿಂದಾಗಲಿ, ತಗ್ಯೆರ್ ಯಾ ಯಿತರ ಕಾರಣದಿಂದಾಗಲಿ ಉದ್ಯೋಗ ಖಾಲಿಯಾದರೆ, ಉಳಿದ ಕಮ್ಮಿಷನರುಗಳು ಸದರೀ ಖಾಲಿಯನ್ನ ಗವರ್ನ್‌ಮೆಂಟಿನವರ ಮಂಜೂರಾತಿಗೆ ಒಳಪಟ್ಟು, ವಿಧಿಸೋಣಾದ ಯೋಗ್ಯತಾಗಳುಳ್ಳ ಬಬ್ಬ ಮನುಷ್ಯರನ್ನು ಕೊಕರಮ್ಮಾಡುವದರ ಮೂಲಕ ಖಾಲಿಯನ್ನ ಭರ್ತೀ ಮಾಡತಕ್ಕದ್ದು; ಮತ್ತು ಹಾಗೆ ಕೊಕರಮ್ಮಾಡಲ್ಪಟ್ಟ ಮನುಷ್ಯರು, ಗವರ್ನ್‌ಮೆಂಟಿನವರಿಂದ ತೆಗೆದುಹಾಕಲ್ಪಟ್ಟ ಹೊರ್ತು, ಖಾಲಿಯಾದ ಉದ್ಯೋಗದಲ್ಲಿದ್ದ ಮೆಂಬರು ಸಾಧಾರಣವಾಗಿ ಉದ್ಯೋಗದಲ್ಲಿರಬಹುದಾಗಿದ್ದ ಕಾಲದಪರಿಯಂತ ಉದ್ಯೋಗದಲ್ಲಿರುವದಕ್ಕೆ ಅರ್ಹರಾಗಿರತಕ್ಕದ್ದು.

ತಾರೀಖು 8ನೇ ಡಿಸೆಂಬರ್ 1896.

ನಂ. 6578.—ಲೋ. ಫಂ. 139—92, ಸ್ ಸ 1892ನೇ ಇಸವಿಯ VIIIನೇ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ಮೇರೆ 1871ನೇ ಇಸವಿಯ 1ನೇ ನಂಬರ್ ಕಾನ್ನಡೆಗಳ ಕ್ರಮವು ಪ್ರವೇಶವನ್ನ ನಿರೋಧಪಡಿಸುವ ಬಗ್ಯೆ ಉಂಟಾದ ಆಕ್ಟಿನ 12ನೇ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ ಮೈಸೂರ ಗವರ್ನ್‌ಮೆಂಟಿನವರು ಆಜ್ಞಾಪಿಸುವದೇನಂದರೆ, ಜೆಂಗಳೂರು ಷಹರ್ ಮ್ಯುನಿಸಿ

ಪೊಲಿಟಿಯು ಸರಹದ್ದುಗಳಲ್ಲಿ ರಾತ್ರೆ 8 ಘಂಟೆಯಿಂದ ಪ್ರಾತಃಕಾಲ 4 ಘಂಟೆ ವರಿಗೂ ಅಕ್ರಮವಾಗಿ ಪ್ರವೇಶ ಮಾಡುವ ಕಾಲ್ನಡಿಗೆಗಳನ್ನ ಹಿಡಿದು ದೊಡ್ಡಿಗೆ ದಾಖಲಾದ ಪ್ರತಿ ರಾಸಿಗೂ ಈ ಕೆಳಗೆ ಕಂಡ ದರಗಳಂತೆ ಜುಲ್ಮಾನೆಗಳು ವಸೂಲ್ಮಾಡಲ್ಪಡುವವು, ಹ್ಯಾಗಂದರೆ:—

ಆನೆಗೆ	ನಾಲ್ಕು ರೂಪಾಯಿಗಳು.
ಒಂಟೆ ಯಾ ಎಮ್ಮೆಗೆ	ಒಂದು ರೂಪಾಯಿ.
ಕುದುರೆ, ಹೆಣ್ಣು ಕುದುರೆ, ಖಿಸಿಯಾದ ಕುದರೆ, ತಟ್ಟು, ಕುದರೆ ಗಂಡುಮರಿ, ಕುದರೆ ಹೆಂಣುಮರಿ, ಗೂಳಿ, ಎತ್ತು, ಆಕಳು ಯಾ ಕಡಸಿಗೆ ..	ಎಂಟಾಣೆಗಳು.
ಕರ, ಕತ್ತೆ ಯಾ ಹಂದಿಗೆ	ನಾಲ್ಕಾಣೆಗಳು.
ಹಗರು, ಹೆಣ್ಣು ಹಗರು, ಕುರಿ, ಕುರಿಪುರಿ, ಮೇಕೆ ಯಾ ಮೇಕೆ ಮರಿಗೆ ..	ಎರಡು ಆಣೆಗಳು.

ತಾರೀಖು 18ನೇ ಡಿಸೆಂಬರ್ 1896.

ನಂ. 7131.—ಜು. 806, ಪೊಲೀಸ್ ಸೂಪರ್ಟೆಂಡೆಂಟ್ ಮೆಸ್ಸರ್ ಜಿ. ಡನ್ನಿಂಗ್‌ಯವರಿಗೆ, 1896ನೇ ನವೆಂಬರ್ 21ನೇ ಮುಕ್ತಂ 5847.—ಜು. 687ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಮೂರು ದಿನಗಳ ಪರೀಕ್ಷಾ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಡಿಸೆಂಬರ್ 1896.

ನಂ. 7262.—ಮಿ. ಫೈ. 252.—92, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರ ಇಂಪೀರಿಯಲ್ ಸರ್ವಿಸ್ ರೆಜಿವೆಂಟಿನ ಅಸಿಸ್ಟೆಂಟ್ ಸರ್ಜ್ಜನ್ ಮೆಸ್ಸರ್ ಜೆ. ಜಿ. ನರೋಹಾ, ಎಲ್. ಎಂ. ಎ ಎಸ್., ಯವರಿಗೆ, 1896ನೇ ನವೆಂಬರ್ 23ನೇ ಮುಕ್ತಂ 5886.—ಜ. ಫೈ. 252.—92ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾಕ್ಕೆ ಜಾಸ್ತೀಯಾಗಿ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಡಿಸೆಂಬರ್ 1896.

ನಂ. 7296.—ಜು. 825, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಪೊಲೀಸಿನ ಚಾರ್ಜಿನಲ್ಲಿರುವ ಯಕ್ಸ್ಟ್ರಾ) ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಹಂಜಾಹುಸೇನ್ ಯವರಿಗೆ, 1896ನೇ ಡಿಸೆಂಬರ್ 4ನೇ ಮುಕ್ತಂ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 26ನೇ ನವೆಂಬರ್ 1896.

ನಂ. 4801—ರೆ. 1664, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಬೆಂಗಳೂರ ತಾಲ್ಲೂಕಿಗೆ ವಳಿತವಾಗಿದ್ದ "ಹಲಸೂರು ಹೋಬಳಿ" ಯನ್ನ ಇನ್ನು ಮೇಲೆ 1896ನೇ ಡಿಸೆಂಬರ್ ಗುರ್ರೆ) ಲಾಗಾಯತು "ಕಸಬಾ ಬೆಂಗಳೂರು ಹೋಬಳಿ" ಎಂಬದಾಗಿ ಕರೆಯಲ್ಪಡತಕ್ಕದ್ದು.

ತಾರೀಖು 12ನೇ ಡಿಸೆಂಬರ್ 1896.

ನಂ. 5420.—ರೆ. ಫೈ. 89.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟು ಮಂಜಿರಾಬಾದ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಪಿ. ಎಫ್. ಬಾರಿಂಗ್ ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಡಿಸೆಂಬರ್ 1896.

ನಂ. 5458.—ರೆ. ಫೈ. 29.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಗವರ್ನ್‌ಮೆಂಟ್ ಚೀಫ್ ಅಸಿಸ್ಟೆಂಟ್ ಕಂಟ್ರೋಲರಾದ ಮೆಸ್ಸರ್ಸ್ ಜೆ. ಆರ್. ಬ್ಯಾರೊ ಯವರಿಗೆ, 1896ನೇ ಡಿಸೆಂಬರ್ 2ನೇ ಮುಕ್ತಂ ಲಾಗಾಯತು ನಾಲ್ಕು ದಿನಗಳ ಕಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 5461.—ಎಕ್ಸೈ. 212, ಸ್ ೧೮೮೧ನೇ ಇಸವಿಯ XXIIನೇ ನಂಬರ್ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನ್ ಅನುಸರಿಸಿ, "ಪ್ರತ್ಯೇಕ ಸಾರಾಯಿ ಅಂಗಡಿ ಲೈಸೆನ್ಸ್ ಡಿ." ಯಲ್ಲಿ ಈ ಕೆಳಗೆ ಕಂಡದ್ದನ್ನ XII (a) ಷರತ್ತಿಗೆ ಬದಲಾಗಿ ಸೇರಿಸಲ್ಪಡತಕ್ಕದ್ದೆಂದು ಮೈಸೂರ್ ಗವರ್ನ್‌ಮೆಂಟಿನವರು ಆಜ್ಞಾಪಿಸುತ್ತಾರೆ.

"ಲೈಸೆನ್ಸ್‌ದಾರನು ಯಾ ಬಿಕರಿದಾರನು ತನ್ನ ಅಂಗಡಿಯಲ್ಲಿ ಗವರ್ನ್‌ಮೆಂಟಿನವರಿಂದ ಸಪ್ಲೈ ಮಾಡಲ್ಪಟ್ಟ ಸಾರಾಯಿ ಶಿವಾಯಿ ಮತ್ಯಾವ ಸಾರಾಯಿಯನ್ನಾಗಲಿ ಯಿಟ್ಟುಕೊಂಡಿರಲೂ ಕೂಡದು, ಮಾರಾಟಕ್ಕೆ ಕೊಡಲೂ ಕೂಡದು ಯಾ ಮಾರಲೂ ಕೂಡದು, ವಿಶೇಷ ಅಪ್ಪಣೆ ಶಿವಾಯಿ 20° ಅಂಡರ್ ಪ್ರೂಫಿಗಿಂತ ಮತ್ಯಾವ ಹೆಚ್ಚು ಬಲಉಳ್ಳ ಸಾರಾಯಿಯನ್ನ ತನ್ನ ಅಂಗಡಿಯಲ್ಲಿ ಯಿಟ್ಟುಕೊಂಡಿರಲೂ ಕೂಡದು, ಮಾರಾಟಕ್ಕೆ ಕೊಡಲೂ ಕೂಡದು ಯಾ ಮಾರಲೂ ಕೂಡದು, ತನ್ನ ಅಂಗಡಿಯಲ್ಲಿ ಮಾರಾಟಕ್ಕಾಗಿ ಕೊಡಲ್ಪಡುವ ಮತ್ತು ಮಾರಲ್ಪಡುವ ಸಾರಾಯಿಯು ಬೆಸೆದ ಮತ್ತು ಮಿಶ್ರ ಪಡಿಸಿ ಕೆಡಿಸದೆ ಯಿಟ್ಟಿರತಕ್ಕದ್ದು."

ತಾರೀಖು 16ನೇ ಡಿಸೆಂಬರ್ 1896.

ನಂ. 5482.—ಫಾ. ಫೈ. 10—95, ಈ ಕೆಳಗೆ ಕಂಡ ಇಸ್ತಿಹಾರ್‌ನಾಮೆಯನ್ನು ಮೈಸೂರ ಗವರ್ಮೆಂಟಿನವರು ಫಾಯಿಷ್ ಮಾಡುತ್ತಾರೆ:—

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಚಾಮರಾಜನಗರ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಆನೆಬಂಗಡಿ ಕೆಲಸಗಳು ನಡಿಯುತಲಿರುವದರ ದೆಸೆಯಿಂದ ಸದರೀ ತಾಲ್ಲೂಕುಗಳ ಸ್ಪೇಟೆ ಫಾರೆಸ್ಟುಗಳಲ್ಲಿ ಎಲ್ಲಾ ವಿಧವಾದ ಷಿಕಾರಿ ಮಾಡುವಣ, ಯಾ ಮಿನು ಹಿಡಿಯುವ ಬಗ್ಯೆ ಡೈನಾಮೈಟ್ ಎಂಬ ಮದ್ದು ಉಕರಣೋಪಸಾವಣ ಇವುಗಳನ್ನ ಮತ್ತೊಂದು ಇಸ್ತಿಹಾರ್ ಕೊಡುವವರಿಗೆ ಕುದ್ಧವಾಗಿ ನಿರೋಧಿಸಲ್ಪಟ್ಟಿರುತ್ತವೆ.

ಮೇಲ್ಕಂಡ ಫಾರೆಸ್ಟುಗಳಲ್ಲಿ ಷಿಕಾರಿಗೋಸ್ಕರ ಯಾ ಮಿನು ಹಿಡಿಯುವದಕ್ಕೋಸ್ಕರ ಮತ್ತು ಇತರ ಷಿಕಾರಿ ಕೆಲಸಗಳಿಗೋಸ್ಕರ, ಫಾರೆಸ್ಟುಗಳ ಕ್ಯಸರ್‌ವೇಟರವರಿಂದಲಾಗಲಿ ಯಾ ಈ ವಿಷಯದಲ್ಲಿ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟ್ ಆಫಿಸರರಿಂದಲಾಗಲಿ ವಿಶೇಷ ಅಪ್ಪಣೆ ಪಡೆಯದೆ ಪ್ರವೇಶ ಮಾಡುವ ಜನಗಳು ಕ್ರಿಮಿನಲ್ ವಿಚಾರಣೆಗೆ ಗುರಿಯಾಗುವರು.

ತಾರೀಖು 17ನೇ ಡಿಸೆಂಬರ್ 1896.

ನಂ. 5511.—ರೆ. 1858, ಈ ಕೆಳಗೆ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಆಕ್ಟಿಂಗ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಪಿ. ಸೀತಾರಾಮಯ್ಯನವರು, ಬಂಗಳೂರಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ (ಕೂಡ್ಲಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ಅಸಿಸ್ಟೆಂಟ್ ಕಮ್ಮಿಷನರ ಮೆಸ್ಟರ್ ಎಚ್. ರಾಮಾನುಜಯ್ಯಂಗಾರ್ರು, ಚಿತ್ರದುರ್ಗದಿಂದ ಮೈಸೂರು ಡಿಸ್ಟ್ರಿಕ್ಟಿಗೆ (ಚಾರ್ಜ್ ಒಪ್ಪಿಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.)

ನಂ. 5561.—ರೆ. ಫೈ. 76—96, ಶಿವನೊಗ್ಗ ಡಿಸ್ಟ್ರಿಕ್ಟು ಹೊನ್ನಾಳಿ ತಾಲ್ಲೂಕಿನ ಆವುಲ್‌ದಾರ್ ಎಚ್. ಗುಂಡಪ್ಪನವರಿಗೆ, 1896ನೇ ನವಂಬರ್ 24ನೇ ಮಕ್ತುಂ 4678—ರೆ. ಫೈ. 76—96ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾವನ್ನ 1896ನೇ ನವಂಬರ್ 8ನೇ ಮಕ್ತುಮಿನ ಪೂರ್ವಾಹ್ನದ ಲಾಗಾಯತು ಉಪಯೋಗಿಸಿಕೊಂಡು 1896ನೇ ಡಿಸೆಂಬರ್ 9ನೇ ಮಕ್ತುಮಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ, ಉಪಯೋಗಿಸಿಕೊಳ್ಳದ ರಜಾ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 18ನೇ ಡಿಸೆಂಬರ್ 1896.

5539.—ರೆ. ಫೈ. 96—95, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 173ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕಿನ ಆವುಲ್‌ದಾರ್ ಸಿರಾ ಶ್ರೀನಿವಾಸರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ. ಸದರೀ ಅವುಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರ್ರು ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 5595.—ರೆ. 1894, ಪಾಸನ ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ ಮೆಸ್ಟರ್ ಬಿ. ಜಿ. ಕೃಷ್ಣಯ್ಯಂಗಾರ್ಯವರಿಗೆ, 1896ನೇ ನವಂಬರ್ 21ನೇ ಮಕ್ತುಂ 4529.—ರೆ. 1574ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ರಜಾವನ್ನ 1896ನೇ ನವಂಬರ್ 30ನೇ ಮಕ್ತುಮಿನ ಪೂರ್ವಾಹ್ನದ ಲಾಗಾಯತು ಉಪಯೋಗಿಸಿಕೊಂಡು 1896ನೇ ಡಿಸೆಂಬರ್ ಗುರ್ಮೀ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದಿರುತ್ತಾರಾಗಿ ಉಪಯೋಗಿಸಿ ಕೊಳ್ಳದ ರಜಾಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 19ನೇ ಡಿಸೆಂಬರ್ 1896.

ನಂ. 5606.—ಫಾ. ಫೈ. 27.—95, ಸ್ಯ 1896ನೇ ಜುಲೈ 27ನೇ ಮಕ್ತುಂ 944.—ಫಾ. ಫೈ. 27.—95ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕ್ಯಸರ್‌ವೇಟರಾಗಿ ಆಕ್ಟು ಮಾಡುವಂತೆ ನೊಕರರಾಗಿದ್ದ ಮೆಸ್ಟರ್ ಎಚ್. ಶ್ರೀನಿವಾಸರಾಯರು, 3ನೇ ಕ್ಲಾಸಿನ ಆಕ್ಟಿಂಗ್ ಅಸಿಸ್ಟೆಂಟ್ ಕ್ಯಸರ್‌ವೇಟರಾದ ಮೆಸ್ಟರ್ ಎಂ. ಜಿ. ರಾಮರಾಯರಿಗೆ ಬದಲಾಗಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಅದರಂತೆ ಸಬ್ ಪ್ರೋಟಮಾಗಿ ಆಕ್ಟಿಂಗ್ ತರೀಕ್ ಯಿರತಕ್ಕದ್ದು.

ನಂ. 5609.—ಫಾ. ಫೈ. 62.—95, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಕಾಕನಕೋಟೆ ರೇಂಜಿನ ಫಾರೆಸ್ಟುಗಳ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕ್ಯಸರ್‌ವೇಟರ್ ಮೆಸ್ಟರ್ ಎಂ. ಜಿ. ರಾಮರಾವ್, ಬಿ. ಏ. ಯವರಿಗೆ, 1896ನೇ ಡಿಸೆಂಬರ್ 15ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿನೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಡಿಸೆಂಬರ್ 1896.

ನಂ. 5613,—ರೆ. ಫೈ. 120.—95—96, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ, ಸಾಗರ ತಾಲ್ಲೂಕು ಆವುಲ್‌ದಾರ್ ಟಿ. ರಾಮಚಂದ್ರರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಒವ್ಹೋಜೀವ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರಟರಿ.